


# ಷಾಪಿಂಗ್ ಬ್ಯಾಗ್ ತಯಾರಿಸಿ

ಈ ವಿಡಿಯೋದಲ್ಲಿ ನಾವು ಬಹು ಉಪಯೋಗಿ ಸ್ಲಿಂಗ್ ಬ್ಯಾಗ್ ಹೊಲಿಯುವುದನ್ನು ಕಲಿಯೋಣ. ನಿಮ್ಮ ಬಳಿ ಒಂದು ಆಕರ್ಷಕ ಬ್ಯಾಗ್ ಇದ್ದು, ಅದರಲ್ಲಿ ಬೇರೆಬೇರೆ ರೀತಿಯ ಸಾಮಾನನ್ನು ಇಡಲು ಸಾಧ್ಯವಿದ್ದರೆ ಪ್ಲಾಸ್ಟಿಕ್ ಬ್ಯಾಗನ್ನು ಬೇಡ ಅನ್ನುವುದು ಎಷ್ಟು ಸುಲಭವಾಗುತ್ತದೆ ಅಲ್ಲವೆ



ಹಾಗಿದ್ದರೆ ತಯಾರಿಸಿ, ಎಲ್ಲಾ ಸೌಲಭ್ಯವುಳ್ಳ ಆಕರ್ಷಕ ಬ್ಯಾಗ್.

ನಿಮಗೆ ಬೇಕು– ಒಂದು ಬಣ್ಣಬಣ್ಣದ ಗಟ್ಟಿಯಾದ ಬಟ್ಟೆ. ಇದರ ಪನ್ನಾ 18 ಇಂಚು ಮತ್ತು 34 ಇಂಚು ಅಗಲ ಇರಬೇಕು. ಒಂದು ಸ್ಲಿಂಗ್ ಹ್ಯಾಂಡಲ್ ಗಟ್ಟಿಯಾಗಿ ಇರಬೇಕು. ಮತ್ತು ಬಹಳಷ್ಟು ಕ್ರಾಫ್ಟ್ ಪಿನ್ನುಗಳು.







ಶುರು ಮಾಡೋಣ.
ಬಟ್ಟೆಯನ್ನು ನಾಲ್ಕೂ ಕಡೆಯಿಂದ ಈ ರೀತಿ ಮಡಚಿ, ಸೀದಾ ಸೈಡ್ ಒಳಗಿನ ಕಡೆಯಿಂದ ಎದುರುಬದುರು ಇರಲಿ. ಎರಡೂ ಕಡೆಯನ್ನು ಈ ರೀತಿ ಜೋಡಿಸಿ ಕ್ರಾಫ್ಟ್‌ಪಿನ್ ಹಾಕಿ. ಈ ಭಾಗವನ್ನು ತೆರೆದಿಡಿ.

ಈಗ ಬಟ್ಟೆಯನ್ನು ಮೆಷಿನ್‌ನಲ್ಲಿ ಹೀಗೇ ಹೊಲಿಯಲು ತನ್ನಿ. 'ಸ್ಟಿಚ್ ಪ್ಯಾಟರ್ನ್ ಸೆಲೆಕ್ಟರ್‌ನ್ನು 'ಎ'ನಲ್ಲಿ ಮತ್ತು ಸ್ಟಿಚ್ ಲೆಂಗ್ತ್‌ನ್ನು 2ರಿಂದ 3ರ ಮಧ್ಯೆ ಇಡಿ.

ಈಗ ಹೊಲಿಗೆ ಆರಂಭಿಸಿ
ಎರಡೂ ಕಡೆಯಿಂದ ರಿವರ್ಸ್ ಸ್ಟಿಚ್‌ನಿಂದ ಹೊಲಿಯುವಾಗ ಗಮನವಿರಲಿ. ಪಿನ್ ಮಾಡಿರುವ ಭಾಗವನ್ನು ಸೈಡ್‌ನಿಂದ ಪೂರ್ತಿ ಹೊಲಿಯಿರಿ.

ಈಗ ದಾರ ಕತ್ತರಿಸಿ. ಮತ್ತು ಹೊಲಿದಿರುವ ಸೈಡ್‌ನ ಪಿನ್ನುಗಳನ್ನು ತೆಗೆಯಿರಿ.




ಈಗ ಇದೇ ಕ್ರಿಯೆಯನ್ನು ಇನ್ನೊಂದು ಭಾಗದಿಂದ ಪುನಃ ಮಾಡಿ.

ಈಗ ಹೊಲಿದಿರುವ ಸೈಡ್‌ನ ಸ್ಟಿಚ್‌ನಲ್ಲಿರುವ ಓವರ್-ಎಡ್ಜ್‌ನ್ನು ಪ್ರಯೋಗಮಾಡಿ.

ಇದಕ್ಕಾಗಿ ಸ್ಟಿಚ್ ಪ್ಯಾಟರ್ನ್ ಸೆಲೆಕ್ಟರ್‌ನ್ನು 'ಸಿ'ನಲ್ಲಿ, ಸ್ಟಿಚ್ ಲೆಂಗ್ತ್ ಸೆಲೆಕ್ಟರ್‌ನ್ನು 'ಎ'ನಲ್ಲಿ ಇಡಿ.

ಬಟ್ಟೆಯನ್ನು ಫೂಟ್‌ನ ಕೆಳಗೆ ಸರಿಯಾಗಿ ಮಧ್ಯದಲ್ಲಿ ಇಡಿ. ಏಕೆಂದರೆ ಸೂಜಿಯ ಪಾಯಿಂಟ್ ಸರಿಯಾಗಿ ಕಾಣಬೇಕು. ಸೂಜಿಯು ಬಟ್ಟೆಯ ಸೈಡ್‌ನಿಂದ ಸರಿಯಾಗಿ ನಡೆಯುತ್ತಿದೆ ಎಂದು ತಿಳಿಯಲು ಬ್ಯಾಲೆನ್ಸ್ ವ್ಹೀಲನ್ನು ಕೈಯಿಂದ ತಿರುಗಿಸಿ. ಗಮನವಿಟ್ಟು ಈ ಬಟ್ಟೆಯ ಮೇಲೆ ಗಟ್ಟಿಯಾಗಿ ಹೊಲಿಯಿರಿ.

ಬಟ್ಟೆ ತೆಗೆದು ಎರಡೂ ಕಡೆಯಿಂದ ಹೆಚ್ಚಿರುವ ದಾರವನ್ನು ಕತ್ತರಿಸಿ. ಯಾವುದಾದರೂ ದಾರ ಸೈಡ್‌ನಿಂದ ಬಿಡುತ್ತಾ ಇದ್ದರೆ ಅದನ್ನು ಕೂಡಾ ಕತ್ತರಿಸಿ. ಏಕೆಂದರೆ ಸೈಡ್‌ನಲ್ಲಿ ಪೂರ್ತಿಯಾಗಿ ಕ್ಲೀನ್ ಆಗಲಿ.



ಈ ಮೇಲಿನ ಭಾಗವನ್ನು ಮಡಚಿ ಹ್ಯಾಂಡಲ್ ಜೋಡಿಸಬೇಕು. ಒಂದು ಕಡೆಯಿಂದ ಮಡಚಲು ಶುರುಮಾಡಿ. ಮೊದಲು ಕಾಲು ಇಂಚು ಮಡಚಿ, ನಂತರ ಇದರ ಮೇಲೆ ಅರ್ಧ ಇಂಚು ಮತ್ತೊಮ್ಮೆ ಮಡಚಿ. ಇದರೊಳಗೆ ಸ್ಲಿಂಗ್ ಬ್ಯಾಗ್‌ನ ಹ್ಯಾಂಡಲ್ ಸೇರಿಸಿ ಮಡಚಿ. ಮತ್ತು ಪಿನ್‌ನಿಂದ ಎಲ್ಲಾ ಭಾಗಗಳನ್ನೂ ಒಟ್ಟಿಗೆ ಜೋಡಿಸಿ.

ಇದೇ ರೀತಿ ಬಟ್ಟೆಯನ್ನು ಮಡಚುತ್ತಾ, ಪಿನ್ ಹಾಕುತ್ತಾ ಹೋಗಿ, ಇನ್ನೊಂದು ತುದಿ ತಲುಪುವವರೆಗೂ. ನೆನಪಿರಲಿ- ಬ್ಯಾಗ್‌ನ ಹ್ಯಾಂಡಲ್‌ನಲ್ಲಿ ಯಾವುದೇ ನೆರಿಗೆ ಇರಬಾರದು. ಈಗ ಹ್ಯಾಂಡಲ್‌ನ ಇನ್ನೊಂದು ಭಾಗವನ್ನು ಜೋಡಿಸಿ. ಎಲ್ಲವನ್ನೂ ಮಡಚಿ ಪಿನ್ ಮಾಡಿದ ನಂತರ ನೀವು ಹೊಲಿಯಲು ತಯಾರಾಗಿದ್ದೀರಿ.




ಸ್ಟಿಚ್ ಪ್ಯಾಟರ್ನ್ ಸೆಲೆಕ್ಟರ್‌ನ್ನು 'ಎ'ನಲ್ಲಿ, ಸ್ಟಿಚ್ ಲೆಂಗ್ತ್‌ನ್ನು ಎರಡೂವರೆಯಲ್ಲಿ ಇಡಿ. ಈಗ ಸೈಡ್‌ನಿಂದ ಹೊಲಿಯಲು ಶುರು ಮಾಡಿ. ಮತ್ತೆ ಹಾಂ! ಪಿನ್ ತೆಗೆಯುವುದನ್ನು ಮರೆಯಬೇಡಿ.



ಹ್ಯಾಂಡ್ಲ್‌ನ್ನು ಇನ್ನೂ ಗಟ್ಟಿ ಮತ್ತು ಬಾಳಿಕೆ ಬರುವಂತೆ ಮಾಡಲು ಇದನ್ನು ಮತ್ತೊಮ್ಮೆ ಹೀಗೆಯೇ ಹೊಲಿಯಿರಿ.

ಈಗ ಹೊಲಿದಿರುವ ಭಾಗದಲ್ಲಿ ಇಸ್ತ್ರಿ ಮಾಡಿ. ಒಳಗಿನ ಭಾಗವನ್ನು ಹೊರಗಿನ ಕಡೆಗೆ ಮಡಚಿ ಬ್ಯಾಗನ್ನು ಸೀದಾ ಮಾಡಿ. ಮೂಲೆಗಳನ್ನು ಈ ರೀತಿ ಸರಿಪಡಿಸಿ.

ಈಗ ನೀವು ನಿಮ್ಮ ಹೊಸ ಎನ್ವಿರಾನ್‌ಮೆಂಟ್ ಫ್ರೆಂಡ್ಲಿ ಬ್ಯಾಗನ್ನು ಷಾಪಿಂಗ್‌ನಲ್ಲಿ ನಿಸ್ಸಂಕೋಚವಾಗಿ ಬಳಸಿ.



ಮತ್ತೀಗ ಬ್ಯಾಗ್ ತಯಾರಿಸಿ ನೆಂಟರು ಮಿತ್ರರಿಗೆ ಹಂಚಿ. ಹೀಗೇ ಮುಂದುವರಿಯಲು ಇದು ನಿಮ್ಮ ಪುಟ್ಟ ಹೆಜ್ಜೆಯಾಗಿದೆ. ಮತ್ತೆ ನಂಬಿ – ಇದಕ್ಕಾಗಿ ನೀವು ಬಹಳಷ್ಟು ಮೆಚ್ಚುಗೆ ಪಡೆಯುತ್ತೀರಿ.